ಅನುಭವಿಸಬೇಕಾಗುತ್ತೆ. ನನಗೆ ಈ ಮನೆಯ ಒಂದೊಂದು ವಸ್ತು ಸಹ ಗೊತ್ತಿದೆ. ಗೊತ್ತಾ ನಿನಗೆ? ಯಾರ ಹತ್ತಿರ ತಮಾಷೆ ಮಾಡ್ತಿದ್ದೀಯ? ಮಾರ್ಕಂಡಬಾಬೂರವರ ಮನೆ ಇದಲ್ಲ ಅಂತ ನನಗೇ ಪಾಠ ಹೇಳ್ತೀಯ, ನಿನ್ನ ಗುಮಾಸ್ತ ನನ್ನ ಹಳೆಯ ಮಿತ್ರ. ಈಚೆಗೆ ನಾನು ಇಲ್ಲಿಗೆ ಬರಲಾಗಲಿಲ್ಲ; ಇಲ್ಲದಿದ್ದಲ್ಲಿ ಈ ಮನೆಗೆ ಬಂದು ಹೋಗುವುದು ಸಾಮಾನ್ಯ ಎಂಬುದು ನಿನಗ್ಗೊತ್ತ? ಇಲ್ಲಿ ಹೊರಗೆ ನಾನೆಷ್ಟು ಸಲ ಕೂತಿದ್ದೇನೆ ಎಂಬುದಕ್ಕೆ ಲೆಕ್ಕವಿಲ್ಲ. ನಿನ್ನನ್ನು ನೀನು ಏನೆಂದು ಕೊಂಡಿದ್ದೀಯ, ನನಗೇ ತಮಾಷೆ ಮಾಡ್ತೀಯ?"

ಅಶೋಕ ಮನೆಯ ಕಿಟಕಿಯನ್ನು ನೋಡಿದ. ಆಗ, ಇನ್ನೊಂದಿಷ್ಟು ಹೇಳಲು ಪ್ರೇರಣೆ ಸಿಕ್ಕಿದಂತಾಯಿತು. ಇದುವರೆಗೆ ಅಲ್ಲಿ ಅವನ ಮುಖವಿತ್ತು. ಸಿಟ್ಟಿನ ಭರದಲ್ಲಿ ಮನೆಯ ನೌಕರ ಮತ್ತೂ ರೇಗಿದ, "ಈಗಲೇ ಹೇಳಲೇ, ಈಗಲೇ ತೋರಿಸಲೇ?" ಎಂದು ಪ್ರತಿ ಆಕ್ರಮಣವೆಸಗಲು ನೋಡಿದ; ಆಗಲೇ ಕಿಡಕಿಯಿಂದ ಮೆಲ್ಲನೆ ಧ್ವನಿಯೊಂದು ಕೇಳಿಸಿತು–

"ಭೇಗಿಯಾ, ಭೇಗಿಯಾ ಇಲ್ಲಿ ಸ್ವಲ್ಪ ಕೇಳು!"

ನೌಕರ ಒಳಗೆ ಹೋಗಿ, ಕಣ್ಣುರೆಪ್ಪೆ ಮಿಟುಕುವುದರೊಳಗೇ ಹೊರ ಬಂದು ಹೇಳಿದ, "ನಿಮ್ಮ ಮಿತ್ರರಾದ ಮಾರ್ಕಂಡಬಾಬೂ ಈ ಮನೆಯಲ್ಲಿ ಯಾವಾಗ ಇದ್ದರು ಎಂದು ಒಡತಿ ಕೇಳುತ್ತಿದ್ದಾರೆ."

ಅಪರಿಚಿತ ವ್ಯಕ್ತಿ ಎದುರು 'ಒಡತಿ ಕೇಳುತ್ತಿದ್ದಾರೆ' ಎಂದು ಕೇಳುವಲ್ಲಿ ನೌಕರನ ನಾಲಿಗೆ ಸ್ವಲ್ಪವೂ ತಡವರಿಸಲಿಲ್ಲ. ಮನೆಯಲ್ಲಿ ಯಾರಿದ್ದರೇನು? ಇವರಿಗೆ ಏನಾಗಬೇಕಿದೆ?

"ಅವರು ಇಲ್ಲಿಯೇ ಇದ್ದರು, ಇಂದೂ ಸಹ ಇಲ್ಲಿಯೇ ಇದ್ದಾರೆ." ಅಶೋಕ ಹೇಳಿದ, "ಈಗ್ಯೆ ಎಂಟು ತಿಂಗಳ ಹಿಂದೆಯಷ್ಟೇ, ಇದೇ ಮನೆಯಲ್ಲಿ ನನಗೆ ಅವರ ಭೇಟಿಯಾಗಿತ್ತು."

ಕಿಡಕಿಯಿಂದ 'ಪಿಚಕ್ಕನೆ' ಬೀಡಾ ಉಗುಳು ಹೊರಗೆ ಬಂದು ಬಿತ್ತು. ಈ ಬಾರಿ ಮುಖ ಸ್ಪಷ್ಟವಾಗಿ ಕಂಡಿತು. ಒಳಗಿನಿಂದ ಧ್ವನಿ ಬಂತು, "ಭೇಗಿಯಾ, ನಾವು ಈ ಮನೆಯಲ್ಲಿ ಕಳೆದ ಐದು ವರ್ಷಗಳಿಂದ ಇದ್ದೀವಿ ಅಂತ ಅವರಿಗೆ ಹೇಳು. ಇಲ್ಲಿ ಮಾರ್ಕಂಡಬಾಬೂ ಫಾರ್ಕಂಡಬಾಬೂ ಯಾರೂ ಇಲ್ಲ. ಇಲ್ಲಿ ಮಾಧವಚಂದ್ರ ಮೊಹಂತಿ ಇದ್ದಾರೆ, ನೇಮ್‌ಪ್ಲೇಟಿನಲ್ಲಿ ಹೆಸರಿದೆ, ನೋಡಲಿ."

ಅಶೋಕ ಈಗ ಕ್ಷಣ ಮಾತ್ರವೂ ಸಹ ಕಾಯಲಿಲ್ಲ; ಸೈಕಲ್ ಏರಿ ಹೊರಟ. ಇದುವರೆಗಿನ ಮಂದ ಸ್ಮೃತಿಯಲ್ಲಿ ಹಠಾತ್ತನೆ ಸತ್ಯದ ಸೂರ್ಯ ಹೊರ ಬಂದ! ಅವರು ಖಂಡಿತ ಮಾಧವ ಬಾಬೂರವರೇ, ಎಮ್.ಸಿ. ಮೊಹಂತಿ, ನಿತ್ಯದ ಪರಿಚಿತ ಮಾಧವ ಬಾಬೂ. ತಾನೆಷ್ಟು ಮೂರ್ಖ? ಮಾಧವರಿಗೆ ಮಾರ್ಕಂಡ! ಕಿಡಕಿಯ ಆಚೆಗಿನ ಮುಖ ಕಂಡು ಬರುತ್ತದೆ. ಮನಸ್ಸಿನಲ್ಲಿ ಲಜ್ಜೆ ಮೂಡುತ್ತದೆ–ಆ ಮುಖ ದೂರಕ್ಕೆ ತಳ್ಳಿದಂತೆ.

ಮಾಧವ ಬಾಬೂ ಖುದ್ದು ತನ್ನನ್ನು ಭೇಟಿಯಾಗಲು ಬರುವಂತೆ ಕಾಣ ಬರುತ್ತಿದೆ. ಭೇಟಿಯಾಗಿದ್ದರೆ ಬಹುಶಃ ಎರಡು ಪುಸ್ತಕಗಳು ಸಿಗುತ್ತಿದ್ದವು. ಗೆಳೆತನದ ಸಾಮೀಪ್ಯದಿಂದಾಗಿ ತಾನು ಮನೆಯೊಳಗೆ ನುಗ್ಗಿದ್ದರೆ? ಆ ಕಿಡಕಿ...

ಆ ಪುಸ್ತಕಗಳು ಹೋಗಲಿ, ಜಃ ಪಲಾಯತಿ ಸ ಜೀವತಿ.

ತನ್ನ ಮನೆಯ ದಿಕ್ಕಿಗೆ ಸ್ವಲ್ಪ ದೂರ ಹೋದ ನಂತರ ಮತ್ತೆ ಕಿಡಕಿಯ ಹಿಂದಿನ ಮುಖ ನೆನಪಾಯಿತು; ಅದರೊಂದಿಗೆ ಇನ್ನೊಂದು ಮುಖ – ಕಮಲಿಯ ಮುಖ ನೆನಪಾಯಿತು. ಕಮಲಿ ನೆರೆಮನೆಯವನ ಮಗಳು, ಬಾಲ್ಯದಿಂದ ತನ್ನನ್ನು ಅಣ್ಣಾ ಎಂದು ಕರೆಯುತ್ತಿದ್ದಳು, ಕಮಲಿಯ ಮದುವೆಯಾಗಿದೆ. ಅಲ್ಲದೆ ಕಮಲಿಯ ಜಾತಿ ಬೇರೆಯಾಗಿತ್ತು, ಅವಳು ಎಮ್.ಸಿ. ಮೊಹಂತಿಯ ಸಹಧರ್ಮಿಣಿಯಾಗಲು ಸಾಧ್ಯವಿಲ್ಲ.

ಆದರೆ ಎಂಥ ಸಾಮ್ಯವಿದೆ! ಖಂಡಿತ ಕಮಲಿಯಂತೆ! ಯೋಚಿಸಿದಾಗ ಮನಸ್ಸು ತುಂಬಿ ಬರುತ್ತದೆ;